ದಿನಾಂಕಃ 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 6 ರವರ ಪರ ವಕೀಲರಿಂದ,

1) ನಾನು ವಕೀಲರ ಸೂಚನೆಯಂತೆ ನಾನು ಆರ್ ಎಸ ಎ ನಂ. 579/2023 ಪ್ರಕರಣವನ್ನು ವಾಪಸ್ಸು ಪಡೆದುಕೊಂಡಿರುತ್ತೇನೆ. ಆರ್ ಎ ನಂ. 45/2017 ಮೇಲ್ಮನವಿಯಲ್ಲಿ ಯಾರು ಪಕ್ಷಗಾರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ಈ ದಾವೆಯ ಪ್ರತಿವಾದಿ 6 ರವರು ಸಹ ಪಕ್ಷಗಾರರು ಆಗಿರುತ್ತಾರೆ ಇರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ 6 ರವರ ಮಾರಾಟಗಾರರನ್ನು ಪಕ್ಷಗಾರರನ್ನಾಗಿ ಸೇರಿಸಲು ಮೇಲ್ಮನವಿಯಲ್ಲಿ ದಿನಾಂಕ 15.06.2018 ರಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟಗಾರರಿಗೆ ದಿನಾಂಕ 31.04.2018 ರಂದು ನೋಟಿಸ ಜಾರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿ. 31.04.2018 ರಂದು ಸದರಿಯವರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಗಳ ಬಗ್ಗೆ ನನಗೆ ಮತ್ತು ನನ್ನ ಮಾರಾಟಗಾರರಿಗೆ ಮಾಹಿತಿ ಇದ್ದರೂ ಸಹ ದಿನಾಂಕ 06.12.2018 ರಂದು ನಾನು ಮೋಸದಿಂದ ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2) ಪ್ರತಿವಾದಿ 1 ರಿಂದ 5 ರವರು ಮೇಲ್ಮನವಿಯಲ್ಲಿ ನೋಟಿಸ್ ಜಾರಿ ಆದ ನಂತರ ಪ್ರತಿವಾದಿ 5 ರವರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ 5 ನೇ ಪ್ರತಿವಾದಿ ದಾವಾಸ್ವತ್ತನ್ನು ಮಾರಾಟ ಮಾಡಬಾರದೆಂದು ದಿನಾಂಕಃ 17.02.2022 ರಂದು ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ಆದೇಶದ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗೆ ಆಗಿರುವ ಕ್ರಯ ಪತ್ರ 6 ನೇ ಪ್ರತಿವಾದಿಗೆ ಅನ್ವಯಿಸುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಮಾಹಿತಿ ಇದ್ದರೂ ಸಹ

ನಾನು ಮೋಸದಿಂದ 5 ನೇ ಪ್ರತಿವಾದಿಯಿಂದ ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 5 ನೇ ಪ್ರತಿವಾದಿಯಿಂದ ಆಸ್ತಿಯನ್ನು ಖರೀದಿ ಮಾಡಿದ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಪ್ರತಿವಾದಿಗಳು ನನಗೆ ಮೋಸದಿಂದ ಕ್ರಯ ಮಾಡಿರುತ್ತಾರೆ ಎಂದು ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಮೋಸದಿಂದ ಕ್ರಯ ಮಾಡಿರುವ ಬಗ್ಗೆ 5 ನೇ ಪ್ರತಿವಾದಿಯ ವಿರುದ್ಧ ಪೋಲಿಸ್ ದೂರು ದಾಖಲು ಮಾಡಿರುವುದಿಲ್ಲ. ಪೋಲಿಸ್ ದೂರು ದಾಖಲು ಮಾಡಲು ತೊಂದರೆ ಇರಲಿಲ್ಲ. ಆದರೆ, ಈ ದಾವೆ ದಾಖಲೆ ಮಾಡಿರುತ್ತೇನೆ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ